Sri Kadidal MANJAPPA.—I agree with the Hon'ble Member.

ಶ್ರೀ ಎಂ. ಚಿಕ್ಕಲಿಂಗಯ್ಯ.—ಆದಷ್ಟು ಜಾಗ್ರತೆ definite ಆಗಿ, ಅಡಿಷನಲ್ ಮೆಂಬರುಗಳನ್ನು ತೆಗೆದುಕೊಳ್ಳಬೇಕೆಂದು ಇಚ್ಛಿಸ್ತಿರ್ಷ್ಟ ಕೊಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಪರಿಶೀಲನೆ ಮಾಡುತ್ತೇವೆ.

Anicut across Kushavati River, Chintamani Taluk.

Q.—473. Sri J. NARAYANAPPA (Chintamani—Scheduled Castes).—

Will the Government be pleased to state :—

(*a*) when the estimate for Rs. 4,000 was prepared for repairing the anicut across the Kushavati River near Yesagalahalli in Chintamani Taluk ;

(*b*) the reason for not taking up the work so far ;

(*c*) whether it is not a fact that it has an atchkat of 105 acres ;

(*d*) the time required for repairing the said anicut ?

A.—Sri Kadidal MANJAPPA (Minister for Revenue and Public Works).—

(*a*) In January 1954. It is for Rs. 40,000 and not Rs. 4,000.

(*b*) The estimate is not yet sanctioned.

(*c*) Yes.

(*d*) About a year to complete the work after the estimate is sanctioned.

ಶ್ರೀ ಜೆ. ನಾರಾಯಣಪ್ಪ.—ಈ ಅಣೆಕಟ್ಟೆ ಒಡೆದು ಹೋಗಿ ಎಷ್ಟು ವರ್ಷವಾಯಿತೆಂದು ಹೇಳುವುದಕ್ಕೆ ಸಾಧ್ಯವೆ ?

*ಶ್ರೀ ಕಡಿದಾಳ್ ಮಂಜಪ್ಪ. ಹೇಳುವುದಕ್ಕಾಗುವುದಿಲ್ಲ.

ಶ್ರೀ ಜೆ. ನಾರಾಯಣಪ್ಪ.—ಈ 105 ಎಕರೆ ಅಚ್ಚುಕಟ್ಟಿಗೆ ತರಿ ಕಂದಾಯ ಕೊಡುತ್ತಾರೋ ಅಥವಾ ಖುಷ್ಕಿ ಕಂದಾಯ ಕೊಡುತ್ತಾರೋ ?

*ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರ ಈಗ ನನ್ನಲ್ಲಿಲ್ಲ.

ಶ್ರೀ ಜೆ. ನಾರಾಯಣಪ್ಪ.—ಈ ಅಚ್ಚುಕಟ್ಟಿನಲ್ಲಿ ಖುಷ್ಕಿ ಫಸಲಿಟ್ಟರೆ ಜಾಗುನೀರಿನಿಂದ ಆಗುವುದಿಲ್ಲ. ತರಿ ಫಸಲಿಟ್ಟರೆ ನೀರು ಸಾಲದೆ ಒಣಗಿ ಹೋಗುವುದು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಜೆ. ನಾರಾಯಣಪ್ಪ.—ಈಗ ನಾನು ಗಮನಕ್ಕೆ ತರುತ್ತಿದ್ದೇನೆ. ಪರಿಸ್ಥಿತಿ ಹೀಗಿರುವುದರಿಂದ ಈಗ ತರಿ ಕಂದಾಯ ಮಾಫಿ ಮಾಡುತ್ತೀರೋ ಅಥವಾ ಖುಷ್ಕಿ ಕಂದಾಯ ಹಾಕುತ್ತೀರೋ ?

ಶ್ರೀ ಕಡಿದಾಳ್ ಮಂಜಪ್ಪ.—ಈ ಅಚ್ಚುಕಟ್ಟಿನಲ್ಲಿ ತರಿಬೆಳೆಯಾಗದಿದ್ದರೆ ತಮ್ಮ ನಲಹೆಯನ್ನು ಬಹಳ ಸಹಾನುಭೂತಿಯಿಂದ ಪರಿಶೀಲಿಸುತ್ತೇವೆ.

ಶ್ರೀ ಜಿ. ಪಾಪಣ್ಣ.—ಈ ಅಣೆಕಟ್ಟು ಒಡೆದು ಹೋಗಿರುವಾಗ ಕಂದಾಯ ತರಿ ದರದಲ್ಲಿ ಹೇಗೆ ಹಾಕುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಸಂದರ್ಭಗಳಲ್ಲಿ ಒಡೆದುಹೋದರೂ ಸ್ವಲ್ಪ ಭಾಗ ನೀರಿರುತ್ತದೆ, ಅದರಿಂದ ತರಿ ವ್ಯವಸಾಯ ಮಾಡುತ್ತಾರೆ.

ಶ್ರೀ ಜೆ. ನಾರಾಯಣಪ್ಪ.—ನಿಜ, ಆದರೆ ಬೆಳೆಯಿಟ್ಟ ಮೇಲೆ ಕೆಲವು ದಿವಸಗಳ ಮೇಲೆ ನೀರು ಸಾಲದೆ ಒಣಗಿ ಹೋಗುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಆ ಪ್ರಾಜೆಕ್ಟ್ ನಾನು ನೋಡಿಲ್ಲ.

ಶ್ರೀ ಜೆ. ನಾರಾಯಣಪ್ಪ.—ಈ ಅಣೆಕಟ್ಟನ್ನು ಜಾಗ್ರತೆ ರಿಪೇರಿ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇದಕ್ಕೆ ಚೆಕ್ನಿಕಲ್ ಡೀಟೈಲ್ಸ್ ನನ್ನ ಹತ್ತಿರ ಇಲ್ಲ. ಆದ್ದರಿಂದ ಈ ಪ್ರಾಜೆಕ್ಟನ್ನು ತೆಗೆದುಕೊಳ್ಳಲು ಸಾಧ್ಯವೆ ಅಥವಾ ಇಲ್ಲವೆ ಎಂಬುದನ್ನು ನಿರ್ಧರವಾಗಿ ಹೇಳಲು ಸಾಧ್ಯವಿಲ್ಲ.

Minor Irrigation Works in Bangalore District.

Q.—491. Sri A. V. NARASIMHA REDDY (Bangalore South).—

Will the Government be pleased to state :—

(*a*) the amount spent out of the amount provided for minor irrigation works in Bangalore District ;

(*b*) the number of works undertaken during the year 1954 and the number completed up to 15th September 1954 and the works still remaining to be completed ?

A.—Sri Kadidal MANJAPPA (Minister for Revenue and Public Works).—

(*a*) Rs. 1,80,818.

(*b*) 164 ; 43 and 121.

ಶ್ರೀ ಎ. ವಿ. ನರಸಿಂಹರೆಡ್ಡಿ.—ಬೆಂಗಳೂರು ಜಿಲ್ಲೆ ಮೈನರ್ ನೀರಾವರಿ ಕಾಂಗಾರಿಗಳಿಗೆ ಎಷ್ಟು ಹಣ ಈಸಾರಿ ಒದಗಿಸಿದ್ದೀರಿ ?

*ಶ್ರೀ ಕಡಿದಾಳ್ ಮಂಜಪ್ಪ.—ಈ ವರ್ಷ ಎಷ್ಟು ಕೊಟ್ಟಿದ್ದಾರೆಂಬುದು ಗೊತ್ತಿಲ್ಲ, ಚೀಫ್ ಇಂಜನಿಯರನ್ನು ಕೇಳಬೇಕು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈಗ 43 ಕಾಂಗಾರಿಗಳು ಮುಗಿದಿವೆಯೆಂದು ಹೇಳಿದೆ. ಇನ್ನೂ ಉಳಿದಿರುವ 121 ಕಾಂಗಾರಿಗಳನ್ನು ಮುಗಿಸಲು ಸಾಕಾದಷ್ಟು ಹಣವಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಕಾದಷ್ಟು ಹಣವನ್ನು ಒದಗಿಸುತ್ತೇವೆ.